**ದಿಃ10-02-2025 ರಂದು ಸಾಕ್ಷಿಯನ್ನು ಕರೆಯಿಸಿ** ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲು ಪ್ರತಿವಾ**ದಿ 1** ಮತ್ತು **4** ರವರ **ಪರ** ಶ್ರೀ ಪಿ ಎಸ್ **ವಕೀಲರಿಂದ** ಃ-

1. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು . ನಾನು ಬಿ ಕಾಂ ವರೆಗೆ ಓದಿದ್ದೇನೆ . ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ . ಈ ದಾವೆ ಹಾಕಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ .

2. ಈ ದಿನಕ್ಕೆ ನಮ್ಮ ತಂದೆಗೆ ಸುಮಾರು 82 ವರ್ಷ ವಯಸ್ಸು ಆಗಿದೆ . ನನ್ನ ತಂದೆಯ ತಂದೆಯ ಹೆಸರು ಪಳನಿಯಪ್ಪ ಎಂರದೆ ಸರಿ . ನಮ್ಮ ತಾತ 2007 ರಲ್ಲಿ ಮೃತ ಪಟ್ಟಿದ್ದಾರೆ . ನನ್ನ ಬಳಿ ನನ್ನ ತಾತನ ಮರಣ ಪ್ರಮಾಣ ಪತ್ರ ಇಲ್ಲ . ಅವರು ಹೊಸಪೇಟೆಯಲ್ಲಿ ಮೃತ ಪಟ್ಟಿರುತ್ತಾರೆ .

3 . ನನ್ನ ಪ್ರಕಾರ ದಾವಾ ಷೆಡ್ಯೂಲ್ ಬಿ ಎಲ್ಲಾ ಸ್ವತ್ತುಗಳು ನಮ್ಮ ತಾತನ ಆಸ್ತಿಗಳು . ಎಲ್ಲಾ ಆಸ್ತಿಗಳು ನಮ್ಮ ತಾತ ಖರೀದಿ ಮಾಡಿದ ಆಸ್ತಿಗಳು . ನಮ್ಮ ತಾತನಿಗೆ 7 ಜನ ಮಕ್ಕಳು . ಅವರಲ್ಲಿ ದೊಡ್ಡವರು ನಮ್ಮ ಅತ್ತೆ ಸುಲೋಚನ . ಸದರಿ 7 ಜನರ ಹೆಸರು ಸುಲೋೀಚನ, ಶಂಕರವೇಲು , ಪದ್ಮಾವತಿ , ಜ್ಯೋತಿ , ಶಾಂತ , ಸೆಲ್ವರಾಜ್ ಮತ್ತು ರಮ. ಸದರಿಯವರಲ್ಲಿ ಸುಲೋಚನ ರವರು ಮೃತ ಪಟ್ಟಿದ್ದ , ಉಳಿದವರು ಜೀವಂತ ಇದ್ದಾರೆ . ಸದರಿ ಸುಲೋಚನ ರವರ ಗಂಡ , ಮಕ್ಕಳು ಇಲ್ಲ. ಉಳಿದವರು ಎಲ್ಲಿ ವಾಸ ಇದ್ದಾರೆ ಎಂದು ನನಗೆ ಗೊತ್ತು . ನಾನು ಉಳಿದವರನ್ನು ಈ ದಾವೆಯಲ್ಲಿ ಸೇರಿಸಿಲ್ಲ . ಅವರನ್ನು ಸೇರಿಸಲು ನಿಮಗೆ ತೊಂದರೆ ಇಲ್ಲ ಎಂದರೇ ಸಾಕ್ಷಿ ನಮ್ಮ ತಾತ ಮೊದಲೇ ಎಲ್ಲರಿಗೂ ಡಿವೈಡ್ ಮಾಡಿದ್ದಾರೆ ಎಂದು ನುಡಿಯುತ್ತಾರೆ .

4. ಆ ರೀತಿ ನಮ್ಮ ತಾತ ಮೊದಲೇ ಭಾಗ ಮಾಡಿರುವ ಬಗ್ಗೆ ನನ್ನ ವಾದ ಪತ್ರದಲ್ಲಿ ತಿಳಿಸಿಲ್ಲ . ಆ ರೀತಿ ಭಾಗ ನೋಂದಣಿ ಮಾಡಿಸಿದ್ದಾರಾ ಎಂದರೆ ಸಾಕ್ಷಿ ಅವರವರ ಹೆಸರಿಗೆ ಮಾಡಿದ್ದು , ನಮ್ಮ ತಂದೆ ಚಿಕ್ಕಪ್ಪನ ಹೆಸರಿಗೆ ಇನ್ನೂ ಮಾಡಿಲ್ಲ ಎಂದು ನುಡಿಯುತ್ತಾರೆ. ನಾನು ನಮ್ಮ ಅತ್ತೆಯ ಹೆಸರಿಗೆ ನೊಂದಣಿ ಮಾಡಿಕೊಟ್ಟ ದಾಖಲೆ ನ್ಯಾಯಾಲಯಕ್ಕೆಹಾಜರು ಪಡಿಸಿಲ್ಲ .

5. ದಾವಾ ಬಿ ಶೆಡ್ಯೂಲ್ ಜಮೀನುಗಳನ್ನು ಈಗಲೂ ನಮ್ಮ ತಂದೆ ನೋಡಿಕೊಳ್ಳುತ್ತಿದ್ದು ಈಗ ಅವರ ಆರೋಗ್ಯ ಸರಿ ಇಲ್ಲದ ಕಾರಣ ನೋಡಿಕೊಳ್ಳಲು ಆಗುತ್ತಿಲ್ಲ . ನಮ್ಮ ತಂದೆಗೆ ವಯಸ್ಸಿಗೆ ಸಂಬಂಧಿಸಿದ ಕಾಯಿಲೆ ಇದೆ .

6. ನಮ್ಮ ತಂದೆ ಜೀವಂತ ಇರುವವರೆಗೂ ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಭಾಗ ಇಲ್ಲ ಎಂದರೆ ಸಾಕ್ಷಿ ನಮ್ಮ ತಾತ ಮಾಡಿರುವ ಆಸ್ತಿಗಳು ನಮ್ಮ ತಂದೆ ವೈಯಕ್ತಿಕವಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಭಾಗ ಇಲ್ಲದೇ ಇದ್ದರೂ ನಾನು ದುರುದ್ದೇಪೂರ್ವಕವಾಗಿ ನಮ್ಮ ಅಪ್ಪನ ಅಕ್ಕ ತಂಗಿಯರನ್ನು ಬಿಟ್ಟು ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಅಪರ ಹಿ. ಸಿ. ನ್ಯಾ . ಹೊಸಪೇಟೆ.